ಏರುತ್ತಾರೆ. ಅಂದಿನಿಂದಲೇ ಅವನ ಸಂತತಿಯ ಚಿಕ್ಕ ಹಲ್ಲಿಗಳು ಬಯಲು ಭೂಮಿಯಲ್ಲಿ ನೀರು ಕಾಣುವಂತೆ, ಮರೀಚಿಕೆಗಳನ್ನು ನಿರ್ಮಿಸಿ ಪ್ರಯಾಣಿಕರನ್ನು ಮೋಸಗೊಳಿಸಿ ಬಾಯಾರಿಕೆಯಿಂದ ಸಾಯುವಂತೆ ಮಾಡುತ್ತಿವೆ. ಅಂದಿನಿಂದ ಗೂಲಾಯ್ಯಾಲೀ ಪೆಲಿಕನ್ನುಗಳು ಬೆಳ್ಳಗಾಗಿವೆ. ಇದಕ್ಕೆ ಕಾರಣ ಬುಲ್ಲೈ ಬುಲ್ಲೈ ಅದರತ್ತ ಎಸೆದ ಬಿಳಿಬೂದಿ. ಬೂದಿಯನ್ನು ಕೊಡವಿಕೊಳ್ಳಲು ಅವನು ತನ್ನ ಕೈಗಳನ್ನು ಕೊಡವಿಕೊಂಡ ಕಾರಣ ಅವು ಬೆಳ್ಳಗಾಗಿಲ್ಲ. ಅಲ್ಲಿ ಕೆಲವು ಕಪ್ಪು ಗರಿಗಳಿವೆ. ಬುಲ್ಲೈ ಬುಲ್ಲೈ ಸಂತತಿಯವರ ಬಣ್ಣವೆಲ್ಲಾ, ವೀಡಾನ ನಿಧನದ ಪ್ರಯುಕ್ತ, ಅವರುಟ್ಟಿದ್ದ ಬಳ್ಳಿಯಂತೆ ಹಸಿರು. ಅಲ್ಲಲ್ಲಿ ಹಳದಿ ಮತ್ತು ಕೆಂಪು ಮಚ್ಚೆಗಳು. ಕಾರಣ, ಬೂದಿ ಮತ್ತು ಅವರಿಂದ ಹೊರಬಂದ ರಕ್ತ.

ವೋಂಬಾ, ನಕ್ಷತ್ರ, ಹುಚ್ಚು ತಾರೆ ಈಗಲೂ ಪ್ರಕಾಶಿಸುತ್ತಿವೆ. ಅವನ್ನು ಕ್ಯಾನೊಪಸ್ ಎಂದು ಕರೆಯುತ್ತೇವೆ. ಅಣಕುಹಕ್ಕಿ ವೀಡಾ ಇಂದಿಗೂ ಹುಲ್ಲಿನ ಗೂಡುಗಳನ್ನು ಕಟ್ಟುತ್ತದೆ. ಅದರ ಮನೆಯ ಎರಡೂ ಕಡೆಗೆ ತೆರೆದ ಬಾಗಿಲುಗಳು. ಇವುಗಳ ಮೂಲಕ ಅದು ಹೊರಗಿಂದ ಒಳಗೆ, ಒಳಗಿಂದ ಹೊರಗೆ ಸದಾ ಓಡಾಡುತ್ತಿರುತ್ತದೆ. ಮನೆಯೇ ಆಟದ ಮೈದಾನ ಅದರ ಪಾಲಿಗೆ.

ವೀಡಾ ಮತ್ತು ಬುಲ್ಲೈ ಬುಲ್ಲೈ ಹಾಕಿದ ಬೆಂಕಿ ದೇಶದ ಒಂದು ಭಾಗದಿಂದ ಮತ್ತೊಂದಕ್ಕೆ ಹಾಯುತ್ತಾ ಬಂತು. ಬಯಲು, ಗುಡ್ಡ, ಕಣಿವೆಗಳನ್ನು ಲೆಕ್ಕಿಸದೇ ಅದು ಎಲ್ಲೆಲ್ಲೂ ಹರಿಯಿತು. ಅದರ ಹಾದಿಯಲ್ಲಿದ್ದ ಮರಗಳೆಲ್ಲಾ ಸುಟ್ಟು ಕಪ್ಪಾದವು. ಅವುಗಳ ಕಾಂಡ ಇನ್ನೂ ಕಪ್ಪಾಗಿಯೇ ಇದೆ. ದೀನ್ನಿ (ಗಟ್ಟಿ ತೊಗಟೆ) ಅಥವಾ ಕಬ್ಬಿಣ–ತೊಗಟೆಗಳು ಬಹುಕಾಲದವರೆಗೆ ಹೊಗೆಯಾಡುತ್ತಿದ್ದವು. ಅವುಗಳಲ್ಲಿ ಈಗಲೂ ದಪ್ಪವಾದ ಬರೆಗಳಿವೆ. ದಿಣ್ಣೆಗಳ ಮೇಲೆ ಅವು ಎದ್ದು ಕಾಣುತ್ತಿದ್ದು ಮರೀಚಿಕೆಗಳ ನಿರ್ಮಾತೃ ಬೀರೀಯನ್ನನ ಸಂತತಿಯ ನೆನಪು ತರುತ್ತವೆ.

ಆಧಾರ: **K, Langloh Parker, Australian Legendary Tales, David Nutt, 270 271 Strand, Melbourne, Melville, Mullen & Slade (1896).**

## ಸಿಡ್ನಿ ಶ್ರೀನಿವಾಸ್

ಮೂಲತಃ ಬೆಂಗಳೂರಿನವರಾದ ಸಿಡ್ನಿ ಶ್ರೀನಿವಾಸ್ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಇ ಪದವಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಎಂ.ಇ ಹಾಗೂ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಸಿಡ್ನಿ ವಿಶ್ವವಿದ್ಯಾಲಯದ 'ಏರೋಸ್ಪೇಸ್ ಅಂಡ್ ಮೆಕ್ಯಾನಿಕಲ್ ಎಂಜಿನಿಯರಿಂಗ್' ವಿಭಾಗದಲ್ಲಿ ಕೆಲಸ ಮಾಡಿ ನಿವೃತ್ತರು. ಆಸ್ಟ್ರೇಲಿಯಾ ಮಾತ್ರವಲ್ಲದೇ ಜರ್ಮನಿ, ಜಪಾನ್, ಅಮೆರಿಕ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗಳನ್ನು ಮಾಡಿದ್ದಾರೆ. 'ಫ್ಲೂಯಿಡ್ ಮೆಕ್ಯಾನಿಕ್', 'ಆಪ್ಟಿಮೈಜೇಶನ್' ವಿಷಯಗಳಲ್ಲಿ ಪರಿಣತರು. ಅವರ ಸುಮಾರು 100 ಸಂಶೋಧನಾ ಪ್ರಬಂಧಗಳು ಪ್ರಕಟವಾಗಿವೆ. 'ಶ್ರೀನಿವಾಸ ರಾಮಾನುಜನ್', 'ಗೆಲಿಲಿಯೊ', 'ನ್ಯೂಟನ್', 'ಅಲ್ಬರ್ಟ್ ಐನ್‌ಸ್ಟೈನ್' ಈ ನಾಲ್ಕು ವಿಜ್ಞಾನಿಗಳ ಕುರಿತ ಪುಸ್ತಕಗಳು ಕನ್ನಡ, ಇಂಗ್ಲಿಷ್‌ನಲ್ಲಿ ಪ್ರಕಟವಾಗಿವೆ. ಇಂಗ್ಲಿಷ್‌ನಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಐದು ತಾಂತ್ರಿಕ ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ. ಅವರ ಕಥಾಸಂಕಲನ 'ಅಳಿಯಲಾರದ ನೆನಹು' ಇತ್ತೀಚೆಗೆ ಪ್ರಕಟವಾಗಿದೆ. ಪ್ರಸ್ತುತ ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದಾರೆ.